ದಿನಾಂಕ **: 29.01.2026** ರಂದು ಡಿಡಬ್ಲ್ಯೂ - 2 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಂ.ಸಿ.ಕೆ., ವಾದಿ ಪರ ವಕೀಲರಿಂದಃ

1 ನೇ ಪ್ರತಿವಾದಿ ನನಗೆ ಸುಮಾರು 35 ರಿಂದ 40 ವರ್ಷದಿಂದ ಪರಿಚಯವಿದ್ದಾರೆ. ನಾನು ಮತ್ತು ಅವರು ಒಂದೇ ಸಮಾಜದವರು. ಅವರ ಜೊತೆ ನನಗೆ ಪರಿಚಯ ಮಾತ್ರವಿರುತ್ತದೆ. ನನ್ನ ತಂದೆಯವರಿಗೆ 1 ನೇ ಪ್ರತಿವಾದಿಯ ಜೊತೆ ಪರಿಚಯ ಮಾತ್ರವಿದ್ದು, ಒಂದೇ ಸಮಾಜದವರಾಗಿದ್ದೇವೆ. ಅವರ ಕುಟುಂಬಸ್ಥರ ಜೊತೆ ವಿಶೇಷವಾದಂತಹ ಸಂಬಂಧಗಳು ಇರುವುದಿಲ್ಲ. ಪರಿಚಯ ಮಾತ್ರ ಇರುತ್ತದೆ. ನಮ್ಮ ಕುಟುಂಬದ ಎಷ್ಟು ಪ್ರಕರಣಗಳನ್ನು 1 ನೇ ಪ್ರತಿವಾದಿ ನಡೆಸಿದ್ದಾರೆ ಎಂದು ನನಗೆ ತಿಳಿದಿಲ್ಲ.

ಜೀನರಾಜ್ ಪಾಂಡಿಯವರ ಪರಿಚಯ ಇರುವುದಿಲ್ಲ. ಪದ್ಮಾವತಿ ಅಮ್ಮನವರು ಯಾವುದಾದರೂ ದಾಖಲೆ ಮಾಡಿದ್ದಾರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ನನ್ನ ತಂದೆ ಮರಣ ಹೊಂದಿ ಸುಮಾರು 15 ವರ್ಷಗಳಾಗಿದ್ದು, ನಿಖರವಾದ ಇಸವಿ ನನಗೆ ನೆನಪಿಲ್ಲ. ನನ್ನ ತಂದೆ ಶಾಲೆಗೆ ಹೋಗಿದ್ದು, ಎಷ್ಟು ಓದಿದ್ದರು ಎಂದು ನನಗೆ ತಿಳಿದಿಲ್ಲ. ನಾನು 10 ನೇ ತರಗತಿವರೆಗೆ ಓದಿದ್ದೇನೆ.

ನನ್ನನ್ನು ಶಾಲೆಗೆ ಯಾರು ದಾಖಲಿಸಿದ್ದಾರೆ ಎಂದು ನನಗೆ ತಿಳಿದಿಲ್ಲ. ನಾನು ಇರ್ವತ್ತೂರು ಸರಕಾರಿ ಶಾಲೆಯಲ್ಲಿ ಮತ್ತು ಸಾಣೂರಿನ ಸರಕಾರಿ ಪದವಿ ಪೂರ್ವ ಶಾಲೆಯಲ್ಲಿ ಹೈಸ್ಕೂಲ್ ಓದಿದ್ದೇನೆ. ನನ್ನ ತಂದೆಯವರು ಸಹಿ ಮಾಡಿರುವಂತಹ ಪಬ್ಲಿಕ್ ದಾಖಲೆಗಳು ಈಗ ಇರುವುದಿಲ್ಲ. ನಾನು ಹುಡುಕಬೇಕು. ಸದರಿ ದಾಖಲೆಗಳನ್ನು ಹಾಜರುಪಡಿಸಲು ಈಗ ಸಾಧ್ಯವಿರುವುದಿಲ್ಲ. ನನ್ನ ಶಾಲಾ ರೆಕಾರ್ಡ್ ಗಳಲ್ಲಿ ನನ್ನ ತಂದೆಯವರ ಸಹಿ ಇರುವ ದಾಖಲೆಗಳನ್ನು ಹಾಜರುಪಡಿಸಲು ಸಾಧ್ಯವಿದೆಯೇ ಎಂದರೆ, ನನ್ನ ತಂದೆಯ ಸಹಿ ಇರುವ ದಾಖಲಗಳು ಶಾಲೆಯಲ್ಲಿ ಇದಯೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ನನ್ನ ತಂದೆ ಕೃಷಿ ಮಾಡುತ್ತಿದ್ದರು. ನನ್ನ ತಂದೆ ನಿಯತಕಾಲಿಕವಾಗಿ 1 ನೇ ಪ್ರತಿವಾದಿಯ ಕಚೇರಿಗೆ ಹೋಗುತ್ತಿದ್ದರು ಎಂದರೆ, ಆಮಂತ್ರಣ ಪತ್ರಿಕೆಗಳನ್ನು ಕೊಡಲು ಹೋಗುತ್ತಿದ್ದರು.

ನಿಡಿ - 6 ಕ್ಕೆ ಯಾರು, ಎಲ್ಲಿ ಮತ್ತು ಯಾವಾಗ ಸಹಿ ಮಾಡಿದ್ದಾರೆ ಎಂದು ನನಗೆ ತಿಳಿದಿಲ್ಲ. ನಿಡಿ - 6 ರಲ್ಲಿ ಪಿ. ಗುಣಪಾಲ ಹೆಗ್ಗಡೆ ಎಂದು ಸಹಿ ಇರುವುದಿಲ್ಲ ಮತ್ತು ಅವರ ಹೆಸರು, ತಂದೆಯ ಹೆಸರು ಮತ್ತು ವಿಳಾಸ ಮಾತ್ರ ನಮೂದಾಗಿದೆ ಎಂದರೆ ಸರಿ. ನಿಡಿ - 6 ರಲ್ಲಿ ನನ್ನ ತಂದೆಯ ಹೆಸರು ಮತ್ತು ಅವರ ತಾಯಿಯ ಹೆಸರು ಮತ್ತು ವಿಳಾಸ ಮಾತ್ರ ಇರುತ್ತದೆ ಎಂದರೆ ಸರಿಯಲ್ಲ. ಅದರಲ್ಲಿ ನಮೂದಾಗಿರುವುದು ನನ್ನ ತಂದೆಯ ಸಹಿ ಆಗಿರುತ್ತದೆ. ನಿಡಿ - 6

ರಲ್ಲಿ ನನ್ನ ತಂದೆಯ ಹೆಸರು, ಅವರ ತಾಯಿಯ ಹೆಸರು ಮತ್ತು ವಿಳಾಸವನ್ನು ನನ್ನ ತಂದೆಯೇ ಬರೆದಿರುತ್ತಾರೆ. ನನ್ನ ತಂದೆಯ ಹಸ್ತಾಕ್ಷರ ಇರುವ ಮೂಲ ದಾಖಲಾತಿ ಯಾವುದೂ ಈಗ ಇರುವುದಿಲ್ಲ. ಹುಡುಕಬೇಕಾಗಿರುತ್ತದೆ. ನಿಡಿ - 6 ರಲ್ಲಿ ನಿಡಿ - 6(ಬಿ) ಮತ್ತು ನಿಡಿ - 6(ಸಿ) ಒಂದೇ ಹಸ್ತಾಕ್ಷರದಲ್ಲಿರುತ್ತದೆ ಎಂದರೆ, ನನಗೆ ಗೊತ್ತಾಗುವುದಿಲ್ಲ. ನಿಡಿ - 6 ರಲ್ಲಿ ನಿಡಿ - 6(ಎ) ಮತ್ತು ನಿಡಿ - 6(ಬಿ) ಸಹಿಗಳಲ್ಲಿ ವ್ಯತ್ಯಾಸವಿದೆ ಎಂದರೆ, ನನಗೆ ಗೊತ್ತಾಗುವುದಿಲ್ಲ. ನಿಡಿ - 6 ನ್ನು ಕಳೆದ ಬಾರಿ ಸಾಕ್ಷಿ ನುಡಿಯುವ ಸಮಯದಲ್ಲಿ ಮೊದಲ ಬಾರಿಗೆ ನೋಡಿರುತ್ತೇನೆ. ಸದರಿ ದಾಖಲೆ 2017 ರಲ್ಲಿ ಮಾಡಿದ ದಾಖಲೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ - 6 ರಲ್ಲಿರುವಂತಹ ಬರವಣಿಗೆಯನ್ನು ಮತ್ತು ಸಂಪೂರ್ಣ ದಾಖಲೆಯನ್ನು ನಾನು ಮತ್ತು 1 ನೇ ಪ್ರತಿವಾದಿ ಸೇರಿ ಸೃಷ್ಟಿಸಿದ ದಾಖಲೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯನ್ನು ಭೇಟಿಯಾಗಿ ಸಾಕಷ್ಟು ವರ್ಷಗಳಾಗಿರುತ್ತದೆ. 1 ನೇ ಪ್ರತಿವಾದಿಯ ಜೊತೆ ಶಾಮೀಲಾಗಿ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕುಟುಂಬದ ಸ್ವತ್ತುಗಳನ್ನು ಅವರೇ ಪಡೆಯುವಂತೆ ನಾನು ಅವರಿಗೆ ಸಹಾಯ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಶ್ರೀಮತಿ ಕೆ.ಎಸ್., 2 ರಿಂದ 4 ನೇ ಪ್ರತಿವಾದಿ ಪರ ವಕೀಲರಿಂದಃ

ಅವರ ಕುಟುಂಬಸ್ಥರ ಜೊತೆ ವಿಶೇಷವಾದಂತಹ ಸಂಬಂಧಗಳು ಇರುವುದಿಲ್ಲ. ಪರಿಚಯ ಮಾತ್ರ ಇರುತ್ತದೆ. ನಮ್ಮ ಕುಟುಂಬದ ಎಷ್ಟು ಪ್ರಕರಣಗಳನ್ನು 1 ನೇ ಪ್ರತಿವಾದಿ ನಡೆಸಿದ್ದಾರೆ ಎಂದು ನನಗೆ ತಿಳಿದಿಲ್ಲ.

ಜೀನರಾಜ್ ಪಾಂಡಿಯವರ ಪರಿಚಯ ಇರುವುದಿಲ್ಲ. ಪದ್ಮಾವತಿ ಅಮ್ಮನವರು ಯಾವುದಾದರೂ ದಾಖಲೆ ಮಾಡಿದ್ದಾರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ನನ್ನ ತಂದೆ ಮರಣ ಹೊಂದಿ ಸುಮಾರು 15 ವರ್ಷಗಳಾಗಿದ್ದು, ನಿಖರವಾದ ಇಸವಿ ನನಗೆ ನೆನಪಿಲ್ಲ. ನನ್ನ ತಂದೆ ಶಾಲೆಗೆ ಹೋಗಿದ್ದು, ಎಷ್ಟು ಓದಿದ್ದರು ಎಂದು ನನಗೆ ತಿಳಿದಿಲ್ಲ. ನಾನು 10 ನೇ ತರಗತಿವರೆಗೆ ಓದಿದ್ದೇನೆ. ನನ್ನನ್ನು ಶಾಲೆಗೆ ಯಾರು ದಾಖಲಿಸಿದ್ದಾರೆ ಎಂದು ನನಗೆ ತಿಳಿದಿಲ್ಲ. ನಾನು ಇರ್ವತ್ತೂರು ಸರಕಾರಿ ಶಾಲೆಯಲ್ಲಿ ಮತ್ತು ಸಾಣೂರಿನ ಸರಕಾರಿ ಪದವಿ ಪೂರ್ವ ಶಾಲೆಯಲ್ಲಿ ಹೈಸ್ಕೂಲ್ ಓದಿದ್ದೇನೆ. ನನ್ನ ತಂದೆಯವರು ಸಹಿ ಮಾಡಿರುವಂತಹ ಪಬ್ಲಿಕ್ ದಾಖಲೆಗಳು ಈಗ ಇರುವುದಿಲ್ಲ. ನಾನು ಹುಡುಕಬೇಕು. ಸದರಿ ದಾಖಲೆಗಳನ್ನು ಹಾಜರುಪಡಿಸಲು ಈಗ ಸಾಧ್ಯವಿರುವುದಿಲ್ಲ. ನನ್ನ ಶಾಲಾ ರೆಕಾರ್ಡ್ ಗಳಲ್ಲಿ ನನ್ನ ತಂದೆಯವರ ಸಹಿ ಇರುವ ದಾಖಲೆಗಳನ್ನು ಹಾಜರುಪಡಿಸಲು ಸಾಧ್ಯವಿದೆಯೇ ಎಂದರೆ, ನನ್ನ

ತಂದೆಯ ಸಹಿ ಇರುವ ದಾಖಲಗಳು ಶಾಲೆಯಲ್ಲಿ ಇದೆಯೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ನನ್ನ ತಂದೆ ಕೃಷಿ ಮಾಡುತ್ತಿದ್ದರು. ನನ್ನ ತಂದೆ ನಿಯತಕಾಲಿಕವಾಗಿ 1 ನೇ ಪ್ರತಿವಾದಿಯ ಕಚೇರಿಗೆ ಹೋಗುತ್ತಿದ್ದರು ಎಂದರೆ, ಆಮಂತ್ರಣ ಪತ್ರಿಕೆಗಳನ್ನು ಕೊಡಲು ಹೋಗುತ್ತಿದ್ದರು.

ನಿಡಿ - 6 ಕ್ಕೆ ಯಾರು, ಎಲ್ಲಿ ಮತ್ತು ಯಾವಾಗ ಸಹಿ ಮಾಡಿದ್ದಾರೆ ಎಂದು ನನಗೆ ತಿಳಿದಿಲ್ಲ. ನಿಡಿ - 6 ರಲ್ಲಿ ಪಿ. ಗುಣಪಾಲ ಹೆಗ್ಗಡೆ ಎಂದು ಸಹಿ ಇರುವುದಿಲ್ಲ ಮತ್ತು ಅವರ ಹೆಸರು, ತಂದೆಯ ಹೆಸರು ಮತ್ತು ವಿಳಾಸ ಮಾತ್ರ ನಮೂದಾಗಿದೆ ಎಂದರೆ ಸರಿ. ನಿಡಿ - 6 ರಲ್ಲಿ ನನ್ನ ತಂದೆಯ ಹೆಸರು ಮತ್ತು ಅವರ ತಾಯಿಯ ಹೆಸರು ಮತ್ತು ವಿಳಾಸ ಮಾತ್ರ ಇರುತ್ತದೆ ಎಂದರೆ ಸರಿಯಲ್ಲ. ಅದರಲ್ಲಿ ನಮೂದಾಗಿರುವುದು ನನ್ನ ತಂದೆಯ ಸಹಿ ಆಗಿರುತ್ತದೆ. ನಿಡಿ - 6 ರಲ್ಲಿ ನನ್ನ ತಂದೆಯ ಹೆಸರು, ಅವರ ತಾಯಿಯ ಹೆಸರು ಮತ್ತು ವಿಳಾಸವನ್ನು ನನ್ನ ತಂದೆಯೇ ಬರೆದಿರುತ್ತಾರೆ. ನನ್ನ ತಂದೆಯ ಹಸ್ತಾಕ್ಷರ ಇರುವ ಮೂಲ ದಾಖಲಾತಿ ಯಾವುದೂ ಈಗ ಇರುವುದಿಲ್ಲ. ಹುಡುಕಬೇಕಾಗಿರುತ್ತದೆ. ನಿಡಿ - 6 ರಲ್ಲಿ ನಿಡಿ - 6(ಬಿ) ಮತ್ತು ನಿಡಿ - 6(ಸಿ) ಒಂದೇ ಹಸ್ತಾಕ್ಷರದಲ್ಲಿರುತ್ತದೆ ಎಂದರೆ, ನನಗೆ ಗೊತ್ತಾಗುವುದಿಲ್ಲ. ನಿಡಿ - 6 ರಲ್ಲಿ ನಿಡಿ - 6(ಎ) ಮತ್ತು ನಿಡಿ - 6(ಬಿ) ಸಹಿಗಳಲ್ಲಿ ವ್ಯತ್ಯಾಸವಿದೆ ಎಂದರೆ, ನನಗೆ ಗೊತ್ತಾಗುವುದಿಲ್ಲ. ನಿಡಿ - 6 ರಲ್ಲಿ ಭುಜಬಲ ಕಡಂಬ ಎಂದು ಬರೆದಿರುವುದು ಸಹಿಯಾಗಿರುವುದಿಲ್ಲ ಎಂದರೆ

ಸರಿಯಲ್ಲ. ನಿಡಿ - 6 ನ್ನು ಕಳೆದ ಬಾರಿ ಸಾಕ್ಷಿ ನುಡಿಯುವ ಸಮಯದಲ್ಲಿ ಮೊದಲ ಬಾರಿಗೆ ನೋಡಿರುತ್ತೇನೆ. ಸದರಿ ದಾಖಲೆ 2017 ರಲ್ಲಿ ಮಾಡಿದ ದಾಖಲೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ - 6 ರಲ್ಲಿರುವಂತಹ ಬರವಣಿಗೆಯನ್ನು ಮತ್ತು ಸಂಪೂರ್ಣ ದಾಖಲೆಯನ್ನು ನಾನು ಮತ್ತು 1 ನೇ ಪ್ರತಿವಾದಿ ಸೇರಿ ಸೃಷ್ಟಿಸಿದ ದಾಖಲೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯನ್ನು ಭೇಟಿಯಾಗಿ ಸಾಕಷ್ಟು ವರ್ಷಗಳಾಗಿರುತ್ತದೆ.

1 ನೇ ಪ್ರತಿವಾದಿಯ ಸಹೋದರ ಶ್ರೀಧರ ಪಾಂಡಿಯವರ ಪರಿಚಯವಿದೆ. ಅವರು ನಮ್ಮ ಊರಿನವರು. ಶ್ರೀಧರ ಪಾಂಡಿಯವರ ಪರಿಚಯ ನನಗೆ ಸುಮಾರು 30 ರಿಂದ 35 ವರ್ಷಗಳಿಂದ ಇರುತ್ತದೆ. 1 ನೇ ಪ್ರತಿವಾದಿಯ ಪರಿಚಯ ಸುಮಾರು 40 ವರ್ಷದಿಂದ ಇರುತ್ತದೆ. ನನ್ನ ತಂದೆಯ ಸಂಬಂಧ 1 ನೇ ಪ್ರತಿವಾದಿಯ ಜೊತೆ ಯಾವ ರೀತಿ ಇತ್ತು ಎಂದು ನನಗೆ ತಿಳಿದಿಲ್ಲ. ನನ್ನ ತಂದೆ ಮತ್ತು 1 ನೇ ಪ್ರತಿವಾದಿ ಅನ್ಯೋನ್ಯತೆಯಿಂದ ಇದ್ದರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ನಾನು ಬ್ಯಾಂಕಿನ ದಾಖಲೆಗಳಿಗೆ ಸಾಕ್ಷಿ ಹಾಕಿದ್ದೇನೆ. ಸಾಕ್ಷಿ ಹಾಕುವ ಸಮಯದಲ್ಲಿ ಮೊದಲು ಸಹಿ ಮಾಡಿ, ನಂತರ ಹೆಸರು, ವಿಳಾಸ ನಮೂದಿಸಬೇಕು ಎಂದರೆ ನನಗೆ ಗೊತ್ತಿಲ್ಲ. ನಾನು ಸಹಿ ಮಾತ್ರ ಹಾಕುತ್ತೇನೆ. ನಿಡಿ - 6 ರಲ್ಲಿ ಭುಜಬಲ ಕಡಂಬ ಎಂದು ನಮೂದು ಇರುವ ಕಾರಣ ಸದರಿ ಹೆಸರು ನನ್ನ ತಂದೆಯ ಸಹಿ ಇರಬಹುದು ಎಂದು ಹೇಳುತ್ತಿದ್ದೇನೆ. ಮುಂದುವರಿದು ಅದು ನನ್ನ ತಂದೆಯ ಸಹಿಯಾಗಿರುತ್ತದೆ ಎಂದು

ನುಡಿಯುತ್ತೇನೆ. ನನಗೆ ನ್ಯಾಯಾಲಯದಿಂದ ನೋಟೀಸು ಬಂದ ತಕ್ಷಣ ಯಾವ ವಿಚಾರಕ್ಕಾಗಿ ಎಂದು ನಾನು ವಕೀಲರನ್ನು ಭೇಟಿಯಾಗಿರುವುದಿಲ್ಲ. ಶ್ರೀಧರ ಪಾಂಡಿಯವರ ಪಾಲನ್ನು ಅವರ ಹೆಂಡತಿ ಮತ್ತು ಮಕ್ಕಳಿಗೆ ಸಿಗಬಾರದು ಎನ್ನುವ ಉದ್ದೇಶದಿಂದ 1 ನೇ ಪ್ರತಿವಾದಿಯ ಜೊತೆ ಶಾಮೀಲಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ನನಗೆ ಸಮಸ್ಸ್ ಮಾತ್ರ ಬಂದಿದ್ದು, ಬೇರೆ ಯಾವುದೇ ಅರ್ಜಿಗಳು ಬಂದಿರುವುದಿಲ್ಲ. ನಾನು ಯಾವ ಉದ್ದೇಶಕ್ಕಾಗಿ ನ್ಯಾಯಾಲಯಕ್ಕೆ ಬರಬೇಕು ಎಂದು ಸದರಿ ನೋಟೀಸಿನಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ. ನನಗೆ ನೋಟೀಸು ಬಂದ ನಂತರ ಈ ಪ್ರಕರಣದ ವಕೀಲರನ್ನಲ್ಲದೇ ಬೇರೆ ಯಾವುದೇ ವಕೀಲರನ್ನು ನಾನು ಸಂಪರ್ಕಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ವಿಚಾರಗಳನ್ನು 1 ನೇ ಪ್ರತಿವಾದಿಯ ಜೊತೆ ಶಾಮೀಲಾಗಿ ಹೇಳಿದ ವಿಚಾರಗಳು ಆಗಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.